ನಿರಾತಂಕ
Nirathanka

**Reg. No. NGB-4-00018-2007-08 | Regd. under Sec. 80G of IT | Pan No. AABTN2815K**

ಇವರಿಗೆ

ದಿನಾಂಕ: 27/07/2023

ಕುಲಸಚಿವರು
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ ಆವರಣ, ಬೆಂಗಳೂರು

**ವಿಷಯ: ಬಿಪಿಎಡ್ ಮೈದಾನದ ಮೆಟ್ಟಿಲುಗಳ ಅಂಚಿಗೆ (ವೀಕ್ಷಕರು ಕುಳಿತುಕೊಳ್ಳುವ ಸ್ಥಳ) ತಡೆಗೋಡೆ ಅಥವಾ ಗ್ರಿಲ್‌ಗಳನ್ನು ನಿರ್ಮಿಸುವ ಕುರಿತು.**

ಮಾನ್ಯರೆ,

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿರಾತಂಕ ಸ್ವಯಂ ಸೇವಾ ಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿಯಾದ ನಾನು, ತಮ್ಮ ಗಮನಕ್ಕೆ ತರುವುದೇನೆಂದರೆ, ಇತ್ತೀಚೆಗೆ ಬಿಪಿಎಡ್ ಮೈದಾನದ ಮೆಟ್ಟಿಲುಗಳ ಅಂಚಿನಿಂದ (ವೀಕ್ಷಕರು ಕುಳಿತುಕೊಳ್ಳುವ ಸ್ಥಳ) ಸುಮಾರು 5-6 ಮೆಟ್ಟಿಲುಗಳ ಎತ್ತರದಿಂದ ಯಾರೋ ಒಬ್ಬರು ಬಿದ್ದದ್ದನ್ನು ನಾನು ಕಂಡೆ, ಅದೃಷ್ಟವಶಾತ್ ಅವರಿಗೆ ಯಾವುದೇ ತೊಂದರೆ ಆಗಲಿಲ್ಲ, ಒಂದು ವೇಳೆ ಅವರೇನಾದರೂ ಇನ್ನೂ ಎತ್ತರದಿಂದ, ಅಂದರೆ ಸುಮಾರು 15 ಮೆಟ್ಟಿಲುಗಳ ಅಂತರದ ಅಂಚಿನಿಂದ ಬಿದ್ದಿದ್ದರೆ ಅವರಿಗೆ ಗಂಭೀರ ಸ್ವರೂಪದ ಗಾಯಗಳಾಗುತ್ತಿತ್ತು. ಆ ಮೆಟ್ಟಿಲುಗಳ ಅಂಚಿಗೆ ತಡೆಗೋಡೆ/ಗ್ರಿಲ್‌ಗಳೇ ಇಲ್ಲದಿರುವುದು ಇದಕ್ಕೆ ಕಾರಣ ಮತ್ತು ಅದು ಅಪಾಯಕ್ಕೆ ಆಹ್ವಾನವನ್ನು ನೀಡುವಂತಿದೆ. ಭವಿಷ್ಯದಲ್ಲಿ ಇನ್ನೂ ಯಾರಾದರೂ ಇದರಿಂದ ಆಕಸ್ಮಿಕವಾಗಿ ಬೀಳುವ ಸಂಭವವಂತೂ ಇದೆ, ಆದುದರಿಂದ ತಾವುಗಳು ಈ ಕೂಡಲೆ ಇದರ ಬಗ್ಗೆ ಗಮನ ಹರಿಸಿ, ಸಂಬಂಧಪಟ್ಟವರಿಗೆ ಸದರಿ ಸ್ಥಳದಲ್ಲಿ ತಡೆಗೋಡೆಯನ್ನು ಅಥವಾ ಗ್ರಿಲ್‌ಗಳನ್ನು ನಿರ್ಮಿಸಲು ಆದೇಶಿಸಬೇಕು ಮತ್ತು ಮುಂದೆ ಆಗುವ ಅನಾಹುತವನ್ನು ದಯಮಾಡಿ ತಪ್ಪಿಸಬೇಕೆಂದು ಈ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಬಿಪಿಎಡ್ ಮೈದಾನದ ಮೆಟ್ಟಿಲುಗಳ (ವೀಕ್ಷಕರು ಕುಳಿತುಕೊಳ್ಳುವ ಸ್ಥಳ) ಫೋಟೋಗಳನ್ನು ತಮ್ಮ ಗಮನಕ್ಕಾಗಿ ಇದರೊಂದಿಗೆ ಲಗತ್ತಿಸಿದ್ದೇನೆ.

ವಂದನೆಗೊಂದಿಗೆ,

ತಮ್ಮ ವಿಶ್ವಾಸಿ

**ರಮೇಶ ಎಂ.ಎಚ್.**

ಸಂಸ್ಥಾಪಕ ಕಾರ್ಯದರ್ಶಿ
ನಿರಾತಂಕ ಸ್ವಯಂ ಸೇವಾ ಸಂಸ್ಥೆ

**#326, 2nd Floor, Opp. to Canara Bank, Near Dr. AIT College, Kengunte, Mallathahalli, Bengaluru-560056**
Ph: 080-23213710, 8073067542, Mob: 9980066890
Email: nirathankango@gmail.com, Web: www.niratanka.org




